ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 14/12/20

## ಮೇಲ್ಮನೆಯಲ್ಲಿ ಗೋ ವಿಧೇಯಕವಿಲ್ಲ । ನೇರ ಸುಗ್ರೀವಾಜ್ಞೆ

# ಸಭಾಪತಿ ಭವಿಷ್ಯ ನಿರ್ಧಾರ ನಾಳೆ

■ **ವಿಕ ಸುದ್ದಿಲೋಕ** ಬೆಂಗಳೂರು 14/12/20

ಬಹುಮತದ ಕೊರತೆ ಹಿನ್ನೆಲೆಯಲ್ಲಿ ವಿಧಾನ ಪರಿಷತ್ತಿನಲ್ಲಿ ಗೋಹತ್ಯೆ ನಿಷೇಧ ವಿಧೇಯಕ ಮಂಡಿಸದೇ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ಸರಕಾರ ನಿರ್ಧರಿಸಿದೆ.

ಗೋಹತ್ಯೆ ನಿಷೇಧ ವಿಧೇಯಕಕ್ಕೆ ಅಂಗೀಕಾರ ಪಡೆಯುವುದಕ್ಕಾಗಿಯೇ ಮಂಗಳವಾರ ಪರಿಷತ್ ಕಲಾಪ ಕರೆಯಲಾಗಿದೆ ಎಂದು ಭಾವಿಸಲಾಗಿತ್ತು. ಆದರೆ ಸರಕಾರ ಈ ವಿಚಾರದಲ್ಲಿ ಒಂದು ಹೆಜ್ಜೆ ಹಿಂದಿಟ್ಟಿದೆ. ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ವಿಚಾರ ಇತ್ಯರ್ಥಕ್ಕಷ್ಟೇ ಈ ಕಲಾಪ ಸೀಮಿತವಾಗಲಿದೆ ಎಂದು ತಿಳಿದು ಬಂದಿದೆ.

ವಿಧಾನ ಪರಿಷತ್ತಿನಲ್ಲಿ ಬಿಜೆಪಿಗೆ ಬಹುಮತವಿಲ್ಲ. ಗೋಹತ್ಯೆ ನಿಷೇಧ ವಿಧೇಯಕ ವಿಧಾನಸಭೆಯಲ್ಲಿ ಮಂಡನೆಯಾದಾಗ ಕಾಂಗ್ರೆಸ್ ಮತ್ತು ಜೆಡಿಎಸ್ ಸಭಾತ್ಯಾಗ ನಡೆಸಿದ್ದವು. ವಿಧೇಯಕಕ್ಕೆ ನಮ್ಮ ಬೆಂಬಲ



ವಿಲ್ಲ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಹೇಳಿದ್ದಾರೆ. ವಿಧೇಯಕವನ್ನು ಮತಕ್ಕೆ ಹಾಕಿದರೆ ಅದು ಸೋಲುವ ಅಪಾಯವಿದೆ. ವಿಚಾರವನ್ನು ಜಂಟಿ ಸದನ ಸಮಿತಿಗೆ ನೀಡಿದರೆ ಸುಗ್ರೀವಾಜ್ಞೆ ಜಾರಿ ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಜಾಗ್ರತಗೊಂಡಿರುವ ಸರಕಾರ ವಿಧೇಯಕ ಮಂಡಿಸದೇ, ಸುಗ್ರೀವಾಜ್ಞೆಯನ್ನೇ ನಂಬಿಕೊಂಡಿದೆ.

**ಅವಿಶ್ವಾಸ ನಿರ್ಣಯಕ್ಕೆ ಜೆಡಿಎಸ್ ಬಲ:** ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಬಿಜೆಪಿಯು ಜೆಡಿಎಸ್ ಬೆಂಬಲ ನಿರೀಕ್ಷಿಸಿದೆ. ಒಂದೊಮ್ಮೆ ಜೆಡಿಎಸ್ ಸಭಾತ್ಯಾಗ ನಡೆಸಿದರೂ ಬಿಜೆಪಿ ಜಯ ಗಳಿಸಲಿದೆ. ಮಂಗಳವಾರ ಕಲಾಪ ಸಲಹಾ ಸಮಿತಿ(ಬಿಎಸಿ)ಯಲ್ಲಿ ಅವಿಶ್ವಾಸ ನಿರ್ಣಯ ವಿಚಾರ ಪ್ರಸ್ತಾಪಿಸಲಿದೆ ಎಂದು ತಿಳಿದು ಬಂದಿದೆ. ನಿಯಮ ಪ್ರಕಾರ 14 ದಿನಗಳ ನೋಟಿಸ್ ಅವಧಿ ಮುಕ್ತಾಯವಾದ ಬಳಿಕ ಅದನ್ನು ಸ್ವೀಕರಿಸಲಾಗಿದೆ ಅಥವಾ ತಿರಸ್ಕರಿಸಲಾಗಿದೆ ಎಂಬುದನ್ನು ಸಭಾಪತಿ ಸದನದಲ್ಲೇ ನೇರವಾಗಿ ತಿಳಿಸಬೇಕು ಎಂಬುದು ಬಿಜೆಪಿ ವಾದ.

»03

### ಯಾರು ಸಭಾಪತಿ?

**ಇದೆಲ್ಲದರ ಮಧ್ಯೆ ಸಭಾಪತಿ ಸ್ಥಾನಕ್ಕೆ ಯಾರು ನೇಮಕವಾಗಬಹುದು ಎಂಬ ಕುತೂಹಲವೂ ಸೃಷ್ಟಿಯಾಗಿದೆ. ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಕೋಟ ಶ್ರೀನಿವಾಸ ಪೂಜಾರಿ, ಮಹಾಂತೇಶ ಕವಟಗಿಮಠ, ಅರುಣ್ ಶಹಾಪುರ, ಶಶಿಲ್ ನಮೋಶಿ ಹಾಗೂ ಆಯನೂರು ಮಂಜುನಾಥ್ ಹೆಸರು ಪ್ರಸ್ತಾಪವಾಗಿದೆ. ಈ ಪೈಕಿ ಯಾರಿಗೆ ಈ ಹುದ್ದೆ ಒಲಿಯಬಹುದೆಂಬುದು ಇನ್ನೂ ದೃಢಪಟ್ಟಿಲ್ಲ.**

## ಸಭಾಪತಿ ಭವಿಷ್ಯ ನಿರ್ಧಾರ ನಾಳೆ

14/12/20

» ಮೊದಲ ಪುಟದಿಂದ

ಈ ಮಧ್ಯೆ ಸಭಾಪತಿ ಪ್ರತಾಪ ಚಂದ್ರ ಶೆಟ್ಟಿ ಮಂಗಳವಾರದ ಕಲಾಪಕ್ಕೆ ಗೈರಾಗಬಹುದೆಂದು ಹೇಳಲಾಗುತ್ತಿದೆ. ತಮ್ಮ ವಿರುದ್ಧ ಸಲ್ಲಿಕೆಯಾದ ಅವಿಶ್ವಾಸ ನಿರ್ಣಯ ಸೇರಿದಂತೆ ಮಹತ್ವದ ನಿರ್ಧಾರಗಳನ್ನು ಉಪ ಸಭಾಪತಿ ಸದನದಲ್ಲಿ ಘೋಷಣೆ ಮಾಡಲು ಸಾಧ್ಯವಿಲ್ಲ ಎಂಬ ನಿಯಮದ ಆಶ್ರಯ ಪಡೆಯುವ ಲೆಕ್ಕಾಚಾರವನ್ನು ಕಾಂಗ್ರೆಸ್‌ನದು. ಕಲಾಪ ಮಂಗಳವಾರಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಅವಿಶ್ವಾಸ ನಿರ್ಣಯಕ್ಕೆ ತಾರ್ಕಿಕ ಅಂತ್ಯ ಸಿಗುವ ಸಾಧ್ಯತೆ ಇದೆ.